

ಚಿತ್ರದ ನಾಯಕಿ ನಂದಿನಿಯೂ ಅಂಥದ್ದೇ ಹುಡುಗಿ. ತನಗೆ ಕಂಡ ತಪ್ಪನ್ನು ನೇರವಾಗಿ ಹೇಳಿ ದಿಟ್ಟವಾಗಿ ಎದುರಿಸುವ ಹುಡುಗಿ. ಹಾಗಾಗಿ ಈ ಪಾತ್ರದಲ್ಲಿ ನನಗೆ ನಟಿಸುವುದು ಸುಲಭ ಅನಿಸಿತು. ಹಾಗೆ ನೋಡಿದರೆ ನಾನು ನಟಿಸುತ್ತಿದ್ದೇನೆ ಅನಿಸುತ್ತಲೇ ಇರಲಿಲ್ಲ' ಎಂದು ಪಾತ್ರದ ಕುರಿತು ಅವರು ಹೇಳಿಕೊಳ್ಳುತ್ತಾರೆ. ಇದೇ ಕಾರಣಕ್ಕೆ ಪಾತ್ರಕ್ಕಾಗಿ ಹೆಚ್ಚಿನ ಸಿದ್ಧತೆ ಮಾಡಿಕೊಳ್ಳುವ ಅಗತ್ಯವೂ ಅವರಿಗೆ ಬೀಳಲಿಲ್ಲ. ಹಾಗೆಂದು ಏನೂ ಸಿದ್ಧತೆ ಇಲ್ಲದೆಯೂ ಅವರು ಸೆಟ್‌ಗೆ ಹೋಗಿಲ್ಲ. ನಿರ್ದೇಶಕರ ಮಾರ್ಗದರ್ಶನದಲ್ಲಿ, ಚಿತ್ರೀಕರಣ ಪ್ರಾರಂಭವಾಗುವುದಕ್ಕೂ ಮುನ್ನ ಪಾತ್ರದ ವರ್ತನೆ, ಸ್ವಭಾವ, ಹಾವಭಾವಗಳ ಕುರಿತು ತಾಲೀಮು ಮಾಡಿಕೊಂಡಿದ್ದರು.

'ತುಂಬ ಜನ ನಟಿಯರಿಗೆ ಮೊದಲ ಸಿನಿಮಾದಲ್ಲಿ ಬಬ್ಲಿ ಬಬ್ಲಿ ಪಾತ್ರ ಸಿಗುತ್ತದೆ. ಆದರೆ ನನ್ನ ವಿಷಯದಲ್ಲಿ ಹಾಗಾಗಲಿಲ್ಲ. ಮೊದಲ ಸಿನಿಮಾದಲ್ಲಿಯೇ ಗಟ್ಟಿ ಪಾತ್ರ ಸಿಕ್ಕಿದೆ. ಈ ಕುರಿತು ನನಗೆ ಹೆಮ್ಮೆಯಿದೆ. ಅಲ್ಲದೆ ಅವಿನಾಶ್, ಅಚ್ಯುತ್ ಕುಮಾರ್ ಅವರಂಥ ಅನುಭವಿ ಪ್ರತಿಭಾವಂತ ನಟರ ಜೊತೆ ನಟಿಸುತ್ತ ಸಾಕಷ್ಟು ವಿಷಯಗಳನ್ನು ಕಲಿತುಕೊಂಡಿದ್ದೇನೆ' ಎಂದು ಖುಷಿ ಹಂಚಿಕೊಳ್ಳುವ ರಾಗಿಣಿಗೆ ನಟಿ ಜ್ಯೋತಿಕಾ ಮತ್ತು ರಮ್ಯಾಕೃಷ್ಣ ಅಂದರೆ ಇಷ್ಟ. 'ರಮ್ಯಾಕೃಷ್ಣ ಬಾಹುಬಲಿ ಸಿನಿಮಾದಲ್ಲಿ ಮಾಡಿದ ಪಾತ್ರ ಎಷ್ಟು ಗಟ್ಟಿಯಾಗಿದೆ ನೋಡಿ. ಅಂಥ ಪಾತ್ರಗಳಲ್ಲಿ ನಟಿಸಬೇಕು ಎಂಬ ಆಸೆ ನನಗಿದೆ' ಎಂದು ಅವರು ಉದಾಹರಿಸುತ್ತಾರೆ.

ರಾಗಿಣಿ ಅವರು ಮೊದಲ ಬಾರಿಗೆ ನಾಯಕಿಯಾಗಿ ನಟಿಸಿರುವ 'ಲಾ' ಸಿನಿಮಾ ಜುಲೈ 17ಕ್ಕೆ ಅಮೆಜಾನ್ ಪ್ರೈಮ್‌ನಲ್ಲಿ ಬಿಡುಗಡೆಯಾಗಲಿದೆ. ಇದು ಅಮೆಜಾನ್ ಪ್ರೈಮ್‌ನಲ್ಲಿ ನೇರವಾಗಿ ಬಿಡುಗಡೆಯಾಗುತ್ತಿರುವ ಮೊದಲ ಕನ್ನಡ ಸಿನಿಮಾ ಕೂಡ ಹೌದು. ಚಿತ್ರಮಂದಿರ, ಕಟೌಟ್, ಹಾರ, ಪ್ರೇಕ್ಷಕರ ನಡುವೆ ಕೂತು ಸಿನಿಮಾ ನೋಡುವ ಅನುಭವವನ್ನು ಮಿಸ್ ಮಾಡಿಕೊಳ್ಳುತ್ತಿಲ್ಲವೇ ಎಂದು ಕೇಳಿದರೆ, 'ಹಾಗೇನಿಲ್ಲ, ಈ ಸಿನಿಮಾ ಒಟಿಟಿಯಲ್ಲೇ ನೇರವಾಗಿ ಬಿಡುಗಡೆಯಾಗುತ್ತಿರುವುದೇ ಒಳ್ಳೆಯದು' ಎಂದರು ರಾಗಿಣಿ.

'ಒಳ್ಳೆಯ ಸಿನಿಮಾ ಹೇಗೆ ಬಿಡುಗಡೆಯಾದರೂ ಜನರು ನೋಡುತ್ತಾರೆ. ಜನರನ್ನು ತಲುಪುತ್ತದೆ. ಹಾಗಾಗಿ ಇದು ಒಟಿಟಿಯಲ್ಲೇ ನೇರವಾಗಿ ಬಿಡುಗಡೆಯಾಗುತ್ತಿರುವುದಕ್ಕೆ ನನಗೆ ಯಾವ ಬೇಸರವೂ ಇಲ್ಲ. ಪಿಆರ್‌ಕೆ ಪ್ರೊಡಕ್ಷನ್ ಅವರ ನಿರ್ಧಾರ ಸರಿಯಾಗಿಯೇ ಇದೆ' ಎಂಬುದು ಅವರ ಮಾತು.

ಹೇಳಿ ಕೇಳಿ ರಾಗಿಣಿ ಅವರದು ಕಲಾವಿದರೇ ತುಂಬಿಕೊಂಡಿರುವ ಕುಟುಂಬ. ಹಾಗಾಗಿ ಮನೆಯಲ್ಲಿಯೂ ಸಾಕಷ್ಟು ಸಿನಿಮಾ ಚರ್ಚೆ ನಡೆಯುತ್ತಿರುತ್ತದಂತೆ. 'ನಾವು ತುಂಬ ಸಿನಿಮಾಗಳನ್ನು ನೋಡುತ್ತಿರುತ್ತೇವೆ. ನಾನು ಮತ್ತೆ ಅತ್ತೆ ಸಿನಿಮಾ ನೋಡುವ ರೀತಿ ಬೇರೆ. ನಾವು ಸಾಮಾನ್ಯ ಪ್ರೇಕ್ಷಕರ ಹಾಗೆ ನೋಡುತ್ತಿರುತ್ತೇವೆ. ಆದರೆ ಪ್ರಜ್ವಲ್ ಮತ್ತೆ ಮಾವ ಸಿನಿಮಾ ನೋಡುವ ರೀತಿ ಬೇರೆಯದೇ ಆಗಿರುತ್ತದೆ. ಅವರು ಆ ಸಿನಿಮಾದ ತಾಂತ್ರಿಕ ಅಂಶಗಳ ಕುರಿತು ಚರ್ಚೆ ಮಾಡುತ್ತಿರುತ್ತಾರೆ. ಕ್ಯಾಮೆರಾ ಆ್ಯಂಗಲ್, ರೀರೆಕಾರ್ಡಿಂಗ್, ಎಡಿಟಿಂಗ್ ಬಗ್ಗೆಯೆಲ್ಲ ಚರ್ಚಿಸುತ್ತಿರುತ್ತಾರೆ' ಎನ್ನುವ ರಾಗಿಣಿಗೆ ಅವರ ಚರ್ಚೆ ಕೇಳಿ ಸಿನಿಮಾದ ತಾಂತ್ರಿಕ ಅಂಶಗಳ ಬಗ್ಗೆ ಸಾಕಷ್ಟು ತಿಳಿವಳಿಕೆ ಬಂದಿದೆಯಂತೆ.

'ಮುಂದೆಯೂ ಹಟ ಹಿಡಿದು ಅವಕಾಶಕ್ಕಾಗಿ ಕಾಯುವುದಿಲ್ಲ. ಒಳ್ಳೆಯ ಸಿನಿಮಾ ಬಂದರೆ ಖಂಡಿತ ನಟಿಸುತ್ತೇನೆ. ಇಲ್ಲದಿದ್ದರೆ ಹೇಗಿದ್ದರೂ ಡಾನ್ಸ್, ಮಾಡೆಲಿಂಗ್ ಇದ್ದೇ ಇದೆ' ಎನ್ನುವ ರಾಗಿಣಿ ಲಾಕ್‌ಡೌನ್ ಸಮಯದಲ್ಲಿಯೂ ಬಿಡದೇ ಆನ್‌ಲೈನ್‌ನಲ್ಲಿ ಡಾನ್ಸ್ ತರಗತಿಗಳನ್ನು ನಡೆಸುತ್ತಿದ್ದಾರೆ. ■



# ಹೋಮ್ ರೂಲ್ ಲಾಕ್‌ಡೌನ್!

'ಕರ್ನಾಟಕ ಸರ್ಕಾರದ ಲಾಕ್‌ಡೌನ್ ನಿಯಮಗಳಿಗೂ ನನ್ನ ಹೆಂಡತಿಗೂ ಏನಾದರೂ ಸಂಬಂಧ ಇರಬಹುದಾ? ಈ ನಿಯಮಗಳ ಜಾರಿಯ ಹಿಂದೆ ಪತ್ನಿಯ ಹಿತರಕ್ಷಣೆಯ ಉದ್ದೇಶವೇನಾದರೂ ಇರಬಹುದಾ?' ಈ ಅನುಭವ ಎಷ್ಟು ಗೃಹಸ್ಥರಿಗೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ರಾಕಿಂಗ್ ಸ್ಟಾರ್ ಯಶ್ ಅವರ ಮನಸಲ್ಲಂತೂ ಈ ಪ್ರಶ್ನೆ ಬಲವಾಗಿಯೇ ಮೂಡಿದೆ. ಎಷ್ಟರಮಟ್ಟಿಗೆಂದರೆ ಮನಸೊಳಗಿನ ಅನುಮಾನವನ್ನು ಸೋಷಿಯಲ್ ಮೀಡಿಯಾದಲ್ಲಿ ಹೊರಹಾಕುವಷ್ಟು!

ಲಾಕ್‌ಡೌನ್ ನಿಯಮಕ್ಕೂ ಹೆಂಡತಿಗೂ ಏನು ಸಂಬಂಧ? ಹಾಗೆಲ್ಲ ಸಂಬಂಧ ಇರಲಿಕ್ಕೆ ಸಾಧ್ಯವೇ ಇಲ್ಲ ಬಿಡಿ ಎಂದು ನಕ್ಕುಬಿಡಬಹುದು. ಆದರೆ ಈ ನಿಯಮಗಳನ್ನು ನೋಡಿದರೆ ಪತ್ನಿಯರ ಹಿತರಕ್ಷಣೆಗಾಗಿಯೇ ಜಾರಿಗೊಳಿಸಿದ ಹಾಗಿದೆ ಎನ್ನುವುದು ಯಶ್ ಅನುಭವ. ಹೇಗೆಂದು ಅವರ ಇತ್ತೀಚೆಗಿನ ಇನ್‌ಸ್ಟಾಗ್ರಾಮ್ ಖಾತೆಯ ಬರಹ ನೋಡಿದರೆ ಸ್ಪಷ್ಟವಾಗುತ್ತದೆ.

'ಕರ್ನಾಟಕ ಸರ್ಕಾರದ ಲಾಕ್‌ಡೌನ್ ನಿಯಮಗಳಿಗೂ ನನ್ನ ಹೆಂಡತಿಗೂ ಏನೋ ಸಂಬಂಧ ಇರುವಂತೆ ಭಾಸವಾಗುತ್ತಿದೆ. ಪ್ರತಿದಿನ ರಾತ್ರಿ ಎಂಟುಗಂಟೆಯ ಒಳಗೆ ಮನೆ ಸೇರಿಕೊಳ್ಳಬೇಕು. ಭಾನುವಾರವಂತೂ ಸಂಪೂರ್ಣ ಲಾಕ್‌ಡೌನ್! ಏನೇ ಇರಲಿ, ಈ ಪತ್ನಿಸ್ನೇಹಿ ಲಾಕ್‌ಡೌನ್ ನಿಯಮಗಳು ನಾವಿಬ್ಬರೂ ಸ್ವಸ್ಥ ಮತ್ತು ಸುರಕ್ಷವಾಗಿರಲು ಸಹಾಯಮಾಡುತ್ತವೆ' ಎಂದು ಯಶ್ ಬರೆದುಕೊಂಡಿದ್ದಾರೆ. ಹೀಗೆ ಬರೆದುಕೊಂಡಿರುವುದು ಮಾತ್ರವಲ್ಲ, ರಾಧಿಕಾ ಜೊತೆಗೆ ಕೂತು ಹಣೆಗೆ ಮೂರು ಬೆರಳಿಟ್ಟುಕೊಂಡು 'ಪಂಗನಾಮ' ಸಂಕೇತ ತೋರಿಸುವ ಫೋಟೊ ಕೂಡ ಹಾಕಿಕೊಂಡಿದ್ದಾರೆ!

ಒಂದು ಫೋಟೊ ಸಾವಿರ ಶಬ್ದಗಳಿಗೆ ಸಮ ಎಂಬ ಮಾತಿದೆ. ಹಾಗಾದರೆ ರಾಕಿಂಗ್ ಸ್ಟಾರ್ ಬರೆದುಕೊಂಡು ಸ್ವಸ್ಥ ಮತ್ತು ಆರೋಗ್ಯದ ಸಾಲುಗಳನ್ನು ನಂಬಬೇಕೋ ಅಥವಾ ಫೋಟೊದಲ್ಲಿನ ಪಂಗನಾಮವನ್ನು ನಂಬಬೇಕೋ ಎಂದು ಅವರ ಅಭಿಮಾನಿಗಳೂ ಕೊಂಚ ಗೊಂದಲಗೊಂಡಿರುವ ಹಾಗಿದೆ.

ಇನ್ನು ಕೆಲವರು ಈ ಸಚಿತ್ರಬರಹಕ್ಕೆ ಬೇರೆಯದೇ ಅರ್ಥ ಕಲ್ಪಿಸಿ ಈ ದಂಪತಿಯ ಜೀವನೋತ್ಸಾಹವನ್ನು ಕೊಂಡಾಡಲು ಶುರುಮಾಡಿದ್ದಾರೆ. ಇದು ಯಶ್ ದಂಪತಿ ಮೂರನೇ ಕುಡಿಯ ಆಗಮನದ ಸೂಚನೆ ಎಂಬ ಊಹೆಯನ್ನೂ ಮಾಡಿದ್ದಾರೆ. ಆದರೆ ಸ್ವತಃ ರಾಧಿಕಾ ಪಂಡಿತ್ ಕೂಡ ಯಶ್ ಪೋಸ್ಟಿಗೆ ಕಮೆಂಟ್ ಮಾಡಿದ್ದು, ಎಲ್ಲರ ಅನುಮಾನ ಬಗೆಹರಿಸಿದ್ದಾರೆ.

'ಒಳ್ಳೆಯದು... ಜವಾಬ್ದಾರಿಯುತ ನಾಗರಿಕನ ರೂಪದಲ್ಲಿ ನೀನು ಈಗಲಾದರೂ ನನ್ನ ನಿಯಮಗಳನ್ನು ಪಾಲಿಸಲು ಶುರುಮಾಡಿದ್ದೀಯಾ. ಅಂದಹಾಗೆ, ಈ ನಿನ್ನ ಮಾತುಗಳನ್ನು ಒಂದು ಸಂಕೇತ ಎಂದು ಭಾವಿಸುವವರಿಗೆ ಸ್ಪಷ್ಟೀಕರಣ; ನಾನು ಗರ್ಭಿಣಿ ಅಲ್ಲ!' ಎಂದು ಹೇಳಿದ್ದಾರೆ. ■